

ಹುರಿದು ತಯಾರಾದ ಮಂಡಾಳನ್ನು ಜರಡಿಯತ್ತ ತೂರುತ್ತಿರುವ ಕಾರ್ಮಿಕ



ಒಣಗಿಸಿ ತಂದ ಅಕ್ಕಿಗೆ ಹುರಿಯಲು ಅನುಕೂಲವಾಗುವಂತೆ ಉಪ್ಪು ನೀರು ಸವರುತ್ತಿರುವ ಕಾರ್ಮಿಕ ಮಹಿಳೆ



ಭತ್ತವನ್ನು ಕುಚ್ಚಲು (ಅರ್ಧಬೇಯಿಸಲು) ಬಾಯ್ಲರ್‌ಗೆ ಹಾಕುತ್ತಿರುವ ಮಂಡಾಳು ಭಟ್ಟಿ ಕಾರ್ಮಿಕರು

## ಮಂಡಾಳು ಎಂಜಿನಿಯರ್‌ಗಳು!

ಮಂಡಾಳ ಭಟ್ಟಿಗೆ ಬೇಕಾಗುವ ಎಲ್ಲ ಯಾಂತ್ರೀಕೃತ ವಸ್ತುಗಳನ್ನು ಸ್ವತಃ ಕಾರ್ಮಿಕರೇ ತಯಾರು ಮಾಡಿಕೊಳ್ಳುತ್ತಾರೆ. ಕಚ್ಚಾ ವಸ್ತುಗಳನ್ನು ಮಾತ್ರ ಗುಜರಿ ಅಂಗಡಿಗಳಿಂದ ಪಡೆಯುತ್ತಾರೆ. ಶಾಲೆಯ ಮೆಟ್ಟಿಲನ್ನೇ ಹತ್ತದ ಅವರಿಗೆ ಈ ಕೌಶಲ ಪೂರ್ವಜರಿಂದ ಬಂದುಬಿಟ್ಟಿದೆ. ತಿರುಗುವ ಮೋಟಾರ್‌ಗಳ ಸಾಮರ್ಥ್ಯ, ಬಾಯ್ಲರ್‌ಗಳ ಆಕಾರ, ಗಾತ್ರ, ಹುರಿಯುವ ಬಾಣಲೆಯ ಗಾತ್ರ, ಒಲೆಯ ಸುತ್ತಳತೆ, ಒಲೆಗೆ ಹಾಕುವ ಕಟ್ಟಿಗೆಯ ಪ್ರಮಾಣ, ಇವುಗಳನ್ನೆಲ್ಲ ಪಕ್ಕಾ ಕಸುಬುದಾರರಂತೆ ಕರಾರುವಕ್ಕಾಗಿ ನಿರ್ಣಯಿಸಿ ರೂಪಿಸಿರುತ್ತಾರೆ.

ಮಂಡಾಳಿನ ಬಗ್ಗೆ ಎಷ್ಟೇ ಭಾವುಕವಾಗಿ ಮಾತನಾಡಿದರೂ, ಅದನ್ನು ತಯಾರಿಸುವ ಕುಟುಂಬಗಳು ಪ್ರಸ್ತುತ ಸಂಕಷ್ಟದಲ್ಲಿರುವುದನ್ನು ಮರೆಯಬಾರದು. ಸ್ಥಳೀಯ ಸಂಸ್ಥೆಗಳ ನಿಯಮಗಳು, ಅಕ್ಕಪಕ್ಕದ ಮನೆಯವರ ವಿರೋಧ, ಸಾಗಾಟ, ಸೂಕ್ತ ಮಾರುಕಟ್ಟೆ ವ್ಯವಸ್ಥೆಯ ಕೊರತೆ ಸೇರಿದಂತೆ ಹಲವು ಸಮಸ್ಯೆಗಳು ಮಂಡಾಳು ತಯಾರಿಕೆಯಲ್ಲಿ ನಿರತರಾಗಿರುವವರನ್ನು ವಿಚಲಿತರನ್ನಾಗಿಸುತ್ತಿವೆ.

ಕೊಪ್ಪಳ ನಗರದಲ್ಲಿ ಮೊದಲು ಮಂಡಾಳು ತಯಾರಿಸುವ ಸುಮಾರು 150 ಕುಟುಂಬಗಳಿದ್ದವು. ಈಗ ಕೇವಲ 50 ಕುಟುಂಬಗಳು ಮಾತ್ರ ಈ ವೃತ್ತಿ ನಡೆಸುತ್ತಿವೆ. ಇವರೆಲ್ಲ ತಮ್ಮ ಮನೆಗಳಲ್ಲೇ ಭಟ್ಟಿಗಳಲ್ಲಿ ಮಂಡಾಳು ತಯಾರಿಸುತ್ತಾರೆ. ಭಟ್ಟಿಗಳಿಂದ ಹೊಗೆ ಬರುತ್ತದೆ, ದೂಳು ಆವರಿಸುತ್ತದೆ ಎಂದು ಸ್ಥಳೀಯರು ದೂರುತ್ತಾರೆ. ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಪರಿಶೀಲನೆ ನೆಪದಲ್ಲಿ ಆಗಾಗ ಇಲ್ಲಿಗೆ ಭೇಟಿ ಕೊಟ್ಟು ಸಮಸ್ಯೆ ತಂದೊಡ್ಡುತ್ತಿದ್ದಾರೆ. ಇದರಿಂದ ರೋಸಿ ಹೋಗಿಯೇ ಬಹಳಷ್ಟು ಕುಟುಂಬಗಳು ಭಟ್ಟಿ ಬಂದ್ ಮಾಡಿವೆ. ನಾವು ಕಷ್ಟಪಟ್ಟಿದ್ದು ಸಾಕು. 'ನಮ್ಮ ಮಕ್ಕಳಿಗೆ ಈ ವೃತ್ತಿ ಬೇಡ. ಅವರು ಶಾಲೆ ಕಲಿತು ಬೇರೆ ಬದುಕು ಕಟ್ಟಿಕೊಳ್ಳಲಿ' ಎಂದು ಸುಮಾರು 50 ವರ್ಷಗಳಿಂದ ಮಂಡಾಳ ಭಟ್ಟಿ ನಡೆಸುತ್ತಿರುವ ಜಿಲಾನ್‌ಸಾಬ್ ಹುರಕಡ್ಲಿ ಬೇಸರ ವ್ಯಕ್ತಪಡಿಸುತ್ತಾರೆ.

ಈ ಹಿಂದೆ ಶಾಸಕರಾಗಿದ್ದ ಸಂಗಣ್ಣ ಕರಡಿ ಅವರು, ಭಟ್ಟಿ ನಡೆಸಲು ಊರ ಹೊರಗೆ ಒಂದು ಕಡೆ ಜಾಗ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದ್ದರು. ಅವರ ನಿರ್ದೇಶನದಂತೆ ಇಲ್ಲಿನ ಸುಮಾರು 100 ಕುಟುಂಬಗಳು ತಲಾ 2,700 ರೂಪಾಯಿ ಶುಲ್ಕ ಕಟ್ಟಿ ಕೈಗಾರಿಕಾ ಇಲಾಖೆಗೆ ಅರ್ಜಿ ಸಲ್ಲಿಸಿದ್ದವು. ಆದರೆ ಇಲ್ಲಿಯವರೆಗೂ ಯಾವುದೇ ಪ್ರಯೋಜನವಾಗಿಲ್ಲ. 'ಈಗ ಜಿಲ್ಲೆಯಲ್ಲಿ 'ಕೈಗಾರಿಕಾ ಪ್ರದೇಶ'ದ ಉದ್ಘಾಟನೆಯಾಗಿದೆ. ಅಲ್ಲಿ ನಿವೇಶನ ಪಡೆಯಲು 7 ಲಕ್ಷ ರೂಪಾಯಿ ಹಣ ತುಂಬಬೇಕು. ಆಸಕ್ತಿಯಿದ್ದವರು ಹಣ ತುಂಬಿ ನಿವೇಶನ ಪಡೆದುಕೊಳ್ಳಿ. ಪ್ರಸ್ತುತ ಇದೊಂದೇ ದಾರಿ ಇರುವುದು' ಎಂದೀಗ ಕೈಗಾರಿಕಾ ಇಲಾಖೆ ಹೊಸ ರಾಗ ಹಾಡುತ್ತಿದೆ. ನಿತ್ಯ ನೂರಾರು ರೂಪಾಯಿ ವ್ಯಾಪಾರ ಮಾಡುವ ಭಟ್ಟಿ ಮಾಲೀಕರು ಅಷ್ಟು ದೊಡ್ಡ ಮೊತ್ತ ಭರಿಸುವುದು ಸಾಧ್ಯವೇ? ನಿವೇಶನ ಪಡೆಯಲು ಬ್ಯಾಂಕುಗಳ ಮೂಲಕ ಸಾಲ ಕೊಡಿಸಿ ಎಂದು ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಅವರಿಗೆ ಮನವಿ ಸಲ್ಲಿಸಲಾಗಿದೆ. ಆ ಮನವಿಗೆ ಪ್ರತಿಕ್ರಿಯಿಸಲು ಸಚಿವರಿಗಿನ್ನೂ ಬಿಡುವಾದಂತಿಲ್ಲ.

ಮಂಡಾಳ ಭಟ್ಟಿಯಲ್ಲಿ ಕಾರ್ಯ ನಿರ್ವಹಿಸುವವರನ್ನು ಕಾರ್ಮಿಕರೆಂದು ಸರ್ಕಾರ ಗುರುತಿಸಿದೆ. ಆದರೆ ಯಾವುದೇ ಸೌಲಭ್ಯಗಳು ಅವರಿಗೆ ತಲುಪಿಲ್ಲ. 'ಈ ವೃತ್ತಿಯಲ್ಲಿರುವವರನ್ನು ಗುಡಿ ಕೈಗಾರಿಕೆ ವ್ಯಾಪ್ತಿಗೆ ಸೇರಿಸಬೇಕು. ಅವರು ಕೈಗಾರಿಕಾ ನಿವೇಶನಗಳನ್ನು ಪಡೆದುಕೊಳ್ಳಲು ಬ್ಯಾಂಕುಗಳಿಂದ ಸಾಲ ಕೊಡಿಸುವ ವ್ಯವಸ್ಥೆ ಮಾಡಬೇಕು. ಸೂಕ್ತ ಮಾರುಕಟ್ಟೆ ವ್ಯವಸ್ಥೆ ಒದಗಿಸಬೇಕು' ಎನ್ನುವುದು ಕಾರ್ಮಿಕ ಮುಖಂಡ ಖಾಸೀಂ ಸರ್ದಾರ ಅವರ ಒತ್ತಾಯ.

ಪ್ರತಿಕ್ರಿಯಿಸಿ: feedback@sudha.com